ರೀನಾ... ಮುಂತಾದವರಿಂದೆಲ್ಲ ಅವನು ಅವಮಾನ ಎದುರಿಸಬೇಕಾಗುತ್ತದೆ. ಅವನ ವಿರುದ್ಧ ನಡೆಯುವ ಷಡ್ಯಂತ್ರಗಳು ಅವನನ್ನು ಇನ್ನಷ್ಟು ಗಟ್ಟಿಯಾಗಿಸುತ್ತವೆ. ಕಾರ್ಖಾನೆಯ ರಾಸಾಯನಿಕ ವಿಭಾಗಕ್ಕೆ ಬೆಂಕಿಬಿದ್ದ ಬಗ್ಗೆ ನಡೆಯುವ ತನಿಖೆ, ಕಚ್ಚಾ ವಸ್ತುವನ್ನು ಸಾಗಿಸಿದ ಆರೋಪದ ಬಗ್ಗೆ ನಡೆಯುವ ವಿಚಾರಣೆಗಳು ನಾಗಪ್ಪನ ಮನೋಪಾತಳಿಯಲ್ಲಿ ಉಂಟು ಮಾಡುವ ಕ್ಷೋಭೆ ಕಡಿಮೆಯೇನಲ್ಲ. ನಾಗಪ್ಪ ಎಂಬ ವ್ಯಕ್ತಿ ಹೀಗೆ ಖಿನ್ನತೆ ಮತ್ತು ವ್ಯಗ್ರತೆ ಮೂಲಕವೇ ಓದುಗರ ಎದುರಿಗೆ ಕಂಡರಿಸಲ್ಪಡುವುದು ಈ ಕಾದಂಬರಿಯ ವೈಶಿಷ್ಟ್ಯವೂ ಹೌದು.



'ಈ ಎಲ್ಲಾ ಸುಳ್ಳು ಸಂಬಂಧಗಳನ್ನು, ಮನುಷ್ಯನನ್ನೇ ಸುಳ್ಳು ಮಾಡುವ ಸಂಬಂಧಗಳನ್ನು ಕಡಿಯುತ್ತಾ ಹೋಗಬೇಕು. ಅಂದರೇನೇ ನಿಜವಾದ ನಿಸ್ಪೃಹವಾದ ಸಂಬಂಧಗಳು ಹುಟ್ಟಬಹುದೇನೋ. ಯಾವುದೇ ರೀತಿಯ ಸ್ವಾರ್ಥಕ್ಕೆ, ಹಿತಾಸಕ್ತಿಗಳ ರಕ್ಷಣೆಗೆ ಕಟ್ಟುಬಿದ್ದಿರದ ಸಂಬಂಧಗಳು ಇದ್ದಲ್ಲಿ ಮಾತ್ರ ಮನುಷ್ಯನೇ ಮನುಷ್ಯನ ಹಿಂಸೆಗೆ ಕಾರಣವಾಗುವುದು ತಪ್ಪಬಹುದೇನೋ' ಎಂದು ಕಾದಂಬರಿಯಲ್ಲಿ ನಾಗಪ್ಪ ಹೇಳುವ ಆ ಅಭಿಪ್ರಾಯವನ್ನು ನಾನು ಒಂದುಕಡೆ ಬರೆದಿಟ್ಟುಕೊಂಡಿದ್ದೆ. ಕಾದಂಬರಿಯೊಂದು ನಮ್ಮದಾಗುವುದು ಹೀಗೆ! ಆ ಮೂಲಕ ನಾಗಪ್ಪ ನಮ್ಮವನಾಗುವುದೂ ಕೂಡ. ನಮ್ಮ ಅಂತರಂಗಕ್ಕೆ ಹೌದೆನ್ನುವ ಅಭಿಪ್ರಾಯವನ್ನು ಮೂಡಿಸುವುದು ಕೂಡ.

ತೊಂಭತ್ತರ ದಶಕ ಬಹುತೇಕ ಚಳುವಳಿಗಳು ಇಳಿಮುಖವಾಗಿ, ತಂತಮ್ಮ ಆಶಯಗಳನ್ನು ಸಾಹಿತ್ಯದ ಭಿತ್ತಿಯಲ್ಲಿ ಬಿತ್ತಿ ಸಂಪದ್ಭರಿತ ಫಸಲನ್ನು ಕೊಡುಗೆಯಾಗಿಸಿದ್ದ ಕಾಲ. ಆ ಕಾಲದ ಓದುಗರನ್ನು ಮುಕ್ತ ಓದಿನಿಂದ ನಿರ್ಬಂಧಿಸುವ ಸೈದ್ಧಾಂತಿಕ ಹಾದಿಯ ಪೂರ್ವ ಪಥಿಕರು ಹೆಚ್ಚಿದ್ದರೂ ಸಾಂಪ್ರದಾಯಿಕ ಸಾಹಿತ್ಯದ ವಿದ್ಯಾರ್ಥಿ ಅಲ್ಲದ ನನಗೆ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯ ಸಿಕ್ಕಿತ್ತು. ಎಂದೇ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ, ನವ್ಯೋತ್ತರ...ಪಂಥದ ಎಲ್ಲಾ ಗಮನಾರ್ಹ ಕೃತಿಗಳನ್ನು ಯಾವುದೇ ಪೂರ್ವಗ್ರಹ ಇಲ್ಲದೇ ಓದುವುದು ಸಾಧ್ಯವಾಗಿತ್ತು. ಹಾಗೆ ಓದಿದ್ದ ಕತೆ ಕಾದಂಬರಿ ಕಥಾನಕಗಳ ನೂರಾರು ಪಾತ್ರಗಳು ಮನಸ್ಸಿನಲ್ಲಿ ಈಗಲೂ ಅಚ್ಚಳಿಯದೆ ಉಳಿದಿವೆ. ಆದರೆ ನಾಗಪ್ಪನ ಪಾತ್ರ ಮಾತ್ರ ಹೀಗೆ ಒಂದಷ್ಟು ಸಾಲುಗಳನ್ನು ಒಂದೆಡೆ ಬರೆದಿಟ್ಟುಕೊಳ್ಳುವಷ್ಟು ಪ್ರಭಾವಿಯಾದುದು.